# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,**

**ವಾರ್ಡ್ ನಂ.40, ದೊಡ್ಡಬಿದರಕಲ್ಲು, ಕರಿಹೋಬನಹಳ್ಳಿ, ಬೆಂಗಳೂರು-5600 58.**

---

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.40ರಲ್ಲಿ ದಿನಾಂಕ: 24.05.2022 ರಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿರುತ್ತಾರೆ.**

1. ಶ್ರೀ. ಡಾ|| ಮುರಳಿಧರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಜಿ.ನಾಗಭೂಷಣ್ ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಶ್ರೀಮತಿ.ಅನುಪಮ.ಡಿ, ವೈದ್ಯಾಧಿಕಾರಿ, ಸರ್ಕಾರಿ ಆಸ್ಪತ್ರೆ, ತಿಪ್ಪೇನಹಳ್ಳಿ.
4. ಶ್ರೀ.ರಮೇಶ್.ಡಿ.ಎಂ, ಹಿರಿಯ ಆರೋಗ್ಯ ಪರಿವೀಕ್ಷಕರು.
5. ಶ್ರೀ.ಮುತ್ತೇಗೌಡ.ವಿ ಕಿರಿಯ ಆರೋಗ್ಯ ಪರಿವೀಕ್ಷಕರು.
6. ಶ್ರೀ.ಬಿ.ರಮೇಶ್, ಸಹಾಯಕ ಅಭಿಯಂತರರು, ಯೋಜನೆ ವಿಭಾಗ.
7. ಶ್ರೀ.ಗವಿಸಿದ್ದಯ್ಯ, ಸಹಾಯಕ ಅಭಿಯಂತರರು, ವಿದ್ಯುತ್ (ಬಿ.ಬಿ.ಎಂ.ಪಿ).
8. ಶ್ರೀ.ಅಮರನಾಥ್.ಎಂ, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
9. ಕುಮಾರಿ.ಚಿತ್ರಿತಾ.ಎಂ, ಸಹಾಯಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ.
10. ಶ್ರೀ.ಮೋಹನ್.ಎಸ್.ವಿ, ಸಹಾಯಕ ಕಾರ್ಯಪಾಲಕ ನಿಯಂತ್ರಣಾ ಅಧಿಕಾರಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ.
11. ಶ್ರೀ.ಜಿ.ನರಸಿಂಹಮೂರ್ತಿ, ಸಹಾಯಕ ಸಬ್ ಇನ್‌ಸ್ಪೆಕ್ಟರ್, ಬ್ಯಾಡರಹಳ್ಳಿ ಪೋಲೀಸ್ ಠಾಣೆ.
12. ಶ್ರೀ.ಅನಿಲ್ ಕುಮಾರ್, ಪೋಲೀಸ್ ಕಾನ್‌ಸ್ಟೇಬಲ್, ಪೀಣ್ಯ ಪೋಲೀಸ್ ಠಾಣೆ.
13. ಶ್ರೀ.ವಿ.ವೆಂಕಟೇಶನ್, ಪ್ಲಾಂಟ್ ವ್ಯವಸ್ಥಾಪಕರು, ಘನ ತ್ಯಾಜ್ಯ ನಿರ್ವಹಣಾ ಘಟಕ.
14. ಶ್ರೀ.ಆಂಜಿನಪ್ಪ, ಕಂದಾಯ ನಿರೀಕ್ಷಕರು, ಕಂದಾಯ ಇಲಾಖೆ.
15. ಶ್ರೀ.ಹೆಚ್.ಕೆ.ಕಗ್ಗಲಯ್ಯ, ಮೇಸ್ತ್ರಿ, ತೋಟಗಾರಿಕೆ ಇಲಾಖೆ.
16. ಶ್ರೀ.ಹನುಮೇಶ್, ಮಾರ್ಷಲ್. ದೊಡ್ಡಬಿದರಕಲ್ಲು.

**ವಾರ್ಡ್ ಸಮಿತಿ ಸದಸ್ಯರುಗಳು.**

1. ಶ್ರೀ.ಕೂರ್ಲಪ್ಪ, ತಿಗಳರಪಾಳ್ಯ, ಸದಸ್ಯರು.
2. ಶ್ರೀ.ಸತೀಶ್, ಹೊಸಹಳ್ಳಿ, ಸದಸ್ಯರು
3. ಶ್ರೀ.ಮಾಲತೇಶ್.ಹೆಚ್.ಬಿ, ದೊಡ್ಡಬಿದರಕಲ್ಲು, ಸದಸ್ಯರು.
4. ಶ್ರೀ.ಮಂಜುನಾಥ್.ಎಂ, ಚನ್ನನಾಯಕನಪಾಳ್ಯ, ಸದಸ್ಯರು.
5. ಶ್ರೀ.ನಟರಾಜ್, ವಿದ್ಯಾಮಾನ್ಯನಗರ, ಸದಸ್ಯರು.
6. ಶ್ರೀ.ಗರುಡಪ್ಪ, ತಿಗಳರಪಾಳ್ಯ, ಸದಸ್ಯರು.
7. ಶ್ರೀಮತಿ.ಮಂಗಳಮ್ಮ, ಮಾರಣ್ಣ ಲೇಔಟ್, ಸದಸ್ಯರು.
8. ಶ್ರೀಮತಿ.ಸುಮಿತ್ರ, ಸಾಯಿಬಾಬಾ ಲೇಔಟ್, ಸದಸ್ಯರು.

**ಈ ಕೆಳಕಂಡ ಅಧಿಕಾರಿಗಳು ಸಭೆಯಲ್ಲಿ ಗೈರು ಹಾಜರಾಗಿರುತ್ತಾರೆ.**

1. ಶ್ರೀ.ರಮೇಶ್, ಪಶು ವೈದ್ಯರು.
2. ಶ್ರೀಮತಿ.ಪೂರ್ಣಿಮಾ.ಜಿ.ಬಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ, ಕೆಂಗೇರಿ
3. ಶ್ರೀ.ಪ್ರಕಾಶ್.ಕೆ.ಎನ್. ಕಿರಿಯ ಅಭಿಯಂತರರು, ಬೆಸ್ಕಾಂ, ಅಂದ್ರಹಳ್ಳಿ.
4. ಶ್ರೀ.ಕೆ.ಶ್ರೀನಿವಾಸಯ್ಯ, ಸಹ ಕಂದಾಯ ಅಧಿಕಾರಿ, ಕಂದಾಯ ಇಲಾಖೆ.
5. ಶ್ರೀ.ಗುರುರಾಜ್.ಎ. ಕಂದಾಯ ಪರಿವೀಕ್ಷಕರು, ದೊಡ್ಡಬಿದರಕಲ್ಲು.
6. ಶ್ರೀ.ಕುಮಾರ್, ಕಂದಾಯ ಪರಿವೀಕ್ಷಕರು, ಹೊಸಹಳ್ಳಿ.
7. ಶ್ರೀ.ಸಂತೋಷ್ ಕುಮಾರ್, ಕಂದಾಯ ವಸೂಲಿಗಾರರು, ಕರಿಹೋಬನಹಳ್ಳಿ.
8. ಶ್ರೀ.ಚಿಕ್ಕಹನುಮಯ್ಯ, ಕಂದಾಯ ಪರಿವೀಕ್ಷಕರು.
9. ಶ್ರೀ.ಶಿವರುದ್ರಪ್ಪ, ಪಿ.ಎಸ್.ಐ, ಪೀಣ್ಯ ಪೋಲೀಸ್ ಠಾಣೆ (ಟ್ರಾಫಿಕ್).
10. ಶ್ರೀಮತಿ.ಅಮೃತಸಾಯಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆ ವಿಭಾಗ.
11. ಶ್ರೀ.ಪವನ್.ಎಂ.ಬಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯಲ್ಲಿ ಎಲ್ಲಾ ಸದಸ್ಯರುಗಳು ಹಾಗೂ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯ ಉದ್ದೇಶವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳು ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**1) ವಾರ್ಡ್ ವ್ಯಾಪ್ತಿಯಲ್ಲಿನ ಆರೋಗ್ಯ ಇಲಾಖೆ ಬಗ್ಗೆ ಚರ್ಚಿಸಲಾದ ವಿಚಾರ.**

- ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಕೋವಿಡ್ ಪ್ರಕರಣಗಳು ಕಂಡುಬಂದಿರುವುದಿಲ್ಲ ಎಂದು ಡಾ॥.ಅನುಪಮ.ಡಿ ರವರು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ 12 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಮೊದಲನೇ ಡೋಸ್ ವ್ಯಾಕ್ಸಿನೇಷನ್ ಪೂರ್ಣಗೊಂಡಿದ್ದು, 2ನೇ ಡೋಸ್ ಶೇ.40 ರಷ್ಟು ಪೂರ್ಣಗೊಂಡಿದೆ ಎಂದು ಡಾ॥.ಅನುಪಮ.ಡಿ ರವರು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರಿಗೆ ಶೌಚಾಲಯ ನಿರ್ಮಿಸಲು ಹೊಸಹಳ್ಳಿ, ಗೊಲ್ಲರಪಾಳ್ಯದ ಸರ್ವೆ ನಂ.02 ರಲ್ಲಿ ಸರ್ಕಾರಿ ಜಾಗವಿದ್ದು, ಶೌಚಾಲಯಕ್ಕೆ ಉಪಯೋಗಿಸಿಕೊಳ್ಳುವಂತೆ ಸಭೆಯಲ್ಲಿ ಚರ್ಚಿಸಲಾಯಿತು.
- ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಖಾನೆಗಳಿಂದ ಶಬ್ದ ಮಾಲಿನ್ಯವಾಗುತ್ತಿದ್ದು, ಇದನ್ನು ನಿಯಂತ್ರಿಸಲು ಸದರಿ ಕಾರ್ಖಾನೆಗಳಿಗೆ ನೋಟೀಸ್ ನೀಡಿ ಎಚ್ಚರಿಕೆ ನೀಡಲಾಗುತ್ತಿದೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ರಾಜಾಕಾಲುವೆಗಳಿಗೆ ಕೈಗಾರಿಕಾ ತ್ಯಾಜ್ಯ ಹಾಗೂ ಕಸ ಹಾಕುವವರಿಗೆ ಎಚ್ಚರಿಕೆ ನೀಡಿ ದಂಡ ವಿಧಿಸುವಂತೆ ನೋಡಲ್ ಅಧಿಕಾರಿಗಳು ಹಿರಿಯ ಆರೋಗ್ಯ ಪರಿವೀಕ್ಷಕರವರಿಗೆ ಸಭೆಯಲ್ಲಿ ಸೂಚಿಸಿದರು.

**2) ವಾರ್ಡ್ ವ್ಯಾಪ್ತಿಯಲ್ಲಿನ ಪೋಲೀಸ್ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ವಾರ್ಡ್ ವ್ಯಾಪ್ತಿಯಲ್ಲಿನ ಅಂದ್ರಹಳ್ಳಿ ಸರ್ಕಲ್‌ನಲ್ಲಿ ಆಟೋಗಳಿಂದ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಇದನ್ನು ನಿಯಂತ್ರಿಸುವಂತೆ ನೋಡಲ್ ಅಧಿಕಾರಿಗಳು ಬ್ಯಾಡರಹಳ್ಳಿ ಪೋಲೀಸ್ ಸಿಬ್ಬಂದಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ರಾಜ್‌ಕುಮಾರ್ ಬಾರ್, ಸಂಗಮ್ ಬಾರ್, ಮಧು ವೈನ್ಸ್ ಹಾಗೂ ಮೀನಾಕ್ಷಿ ಬಾರ್‌ಗಳ ಹತ್ತಿರ ಸಂಜೆಯ ಸಮಯದಲ್ಲಿ ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸದರಿ ಬಾರ್‌ಗಳಿಗೆ ದಂಡವನ್ನು ವಿಧಿಸಿ ಎಚ್ಚರಿಕೆ ನೀಡಿ ಸೂಕ್ತ ಕ್ರಮಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**3) ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ ಬಗ್ಗೆ ಚರ್ಚಿಸಲಾದ ವಿಷಯಗಳು**

- ವಾರ್ಡ್ ವ್ಯಾಪ್ತಿಯಲ್ಲಿ ಮೆಘಾ ಕನ್‌ಸ್ಟ್ರಕ್ಷನ್ ವತಿಯಿಂದ ಪೈಪ್ ಲೈನ್ ಕಾಮಗಾರಿ ಕೆಲಸ ಬಹುತೇಕ ಪೂರ್ಣಗೊಂಡಿದ್ದು, ಕಲ್ವರ್ಟ್ ಹತ್ತಿರ ಕಾಮಗಾರಿ ಕೆಲಸ ಬಾಕಿ ಇದ್ದು, ದಿನಾಂಕ: 26/05/2022 ರಂದು ಬೆಳ್ಳಗ್ಗೆ 10.30ಕ್ಕೆ ಸದಸ್ಯರುಗಳೊಂದಿಗೆ ಸ್ಥಳ ಪರಿಶೀಲಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

**4) ವಾರ್ಡ್ ವ್ಯಾಪ್ತಿಯಲ್ಲಿನ ಕಾಮಗಾರಿ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ವಾರ್ಡ್ ವ್ಯಾಪ್ತಿಯಲ್ಲಿ ಎಸ್.ಡಬ್ಲ್ಯೂ.ಎಂ ಪ್ಲಾಂಟ್ ಅನುದಾನದಡಿಯಲ್ಲಿ ಮಾರಣ್ಣ ಬಡಾವಣೆಯ ರಸ್ತೆಗಳ ಅಭಿವೃದ್ಧಿ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

**5) ವಾರ್ಡ್ ವ್ಯಾಪ್ತಿಯಲ್ಲಿನ ಯೋಜನೆ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು**

- ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೇ 9 ಬೋರ್ ವೆಲ್‌ಗಳನ್ನು ಕೊರೆದಿದ್ದು, ಇನ್ನೂ 11 ಬೋರ್‌ವೆಲ್ ಗಳನ್ನು ಕೊರೆಯುವುದು ಬಾಕಿ ಇದೆ ಎಂದು ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ ಅಂದ್ರಹಳ್ಳಿ, ಸಾಯಿಬಾಬಾ ನಗರ, ವಿದ್ಯಾಮಾನ್ಯ ನಗರ ಇಸ್ಟ್ ಮತ್ತು ವೆಸ್ಟ್, ಶನಿಮಹಾತ್ಮ ದೇವಸ್ಥಾನ ತಿಗಳರಪಾಳ್ಯ, ಚಕ್ರನಗರ, ಕರಿಹೋಬನಹಳ್ಳಿ, ಮಾರುತಿ ಬಡಾವಣೆ, ಇಂದಿರಾನಗರ, ವೇಣುಗೋಪಾಲನಗರ, ಮಾಸ್ತಯ್ಯ ಬಡಾವಣೆ ಮತ್ತು ಚನ್ನನಾಯಕನಪಾಳ್ಯ ಈ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಬೋರ್‌ವೆಲ್‌ಗಳ ಅವಶ್ಯಕತೆ ಹೆಚ್ಚಾಗಿದೆ ಎಂದು ಸದಸ್ಯರುಗಳು ಸಭೆಯಲ್ಲಿ ತಿಳಿಸಿದರು.

AE 26/5

6) ವಾರ್ಡ್ ವ್ಯಾಪ್ತಿಯಲ್ಲಿನ ಕಂದಾಯ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು

- ವಾರ್ಡ್ ವ್ಯಾಪ್ತಿಯಲ್ಲಿ ಮಳೆಯಿಂದ ಹಾನಿ ಆಗಿರುವ ಸಂತ್ರಸ್ಥರ ಪಟ್ಟಿಯ ಬಗ್ಗೆ ಹಲವಾರು ಆಕ್ಷೇಪಣೆಗಳು ಬಂದಿದ್ದು, ನಿಜವಾಗಿಯೂ ಹಾನಿಯಾಗಿರುವ ಹಲವಾರು ಮನೆಗಳು ಪಟ್ಟಿಯಲ್ಲಿ ಸೇರಿಲ್ಲವೆಂದು ದೂರು ಬಂದಿರುತ್ತವೆ. ಆದ್ದರಿಂದ ಸದರಿ ಪಟ್ಟಿಯನ್ನು ಪುನರ್ ಪರಿಶೀಲಿಸಿ ವಾರ್ಡ್ ಕಮಿಟಿ ಸದಸ್ಯರೊಂದಿಗೆ ಚರ್ಚಿಸಿ ಅಂತಿಮಗೊಳಿಸಬೇಕೆಂದು ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.
- ಕಂದಾಯ ಇಲಾಖೆ ಸಿಬ್ಬಂದಿಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲದಿರುವ ಬಗ್ಗೆ ಹಲವಾರು ದೂರುಗಳು ಬಂದಿರುತ್ತದೆ. ಆದುದರಿಂದ ಮುಂದಿನ ವಾರ್ಡ್ ಕಮಿಟಿ ಸಭೆಗಳಿಗೆ ಸಹ ಕಂದಾಯ ಅಧಿಕಾರಿಗಳು ಹಾಗೂ ಎಲ್ಲಾ ಆರ್.ಐ ಮತ್ತು ಟಿ.ಐ ಗಳು ಖಾತಾ ಮತ್ತು ಕಂದಾಯದ ಮಾಹಿತಿಯೊಂದಿಗೆ ಕಡ್ಡಾಯವಾಗಿ ಸಭೆಗೆ ಹಾಜರಾಗುವಂತೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿನ ಬ್ಲೂಜೆ ಬಡಾವಣೆಯನ್ನು ಬಿ.ಬಿ.ಎಂ.ಪಿ ಅಧೀನಕ್ಕೆ ಪಡೆದುಕೊಳ್ಳಲು ಸಹ ಕಂದಾಯ ಅಧಿಕಾರಿಗಳು ಎಸ್ಟೇಟ್ ಅಧಿಕಾರಿ ಹಾಗೂ ಬಿಡಿಎ ಅಧಿಕಾರಿಗಳಿಗೆ ಪತ್ರ ಬರೆಯುವಂತೆ ಸಭೆಯಲ್ಲಿ ಚರ್ಚಿಸಲಾಯಿತು.

7) ವಾರ್ಡ್ ವ್ಯಾಪ್ತಿಯಲ್ಲಿನ ಎಸ್.ಡಬ್ಲ್ಯೂ.ಡಿ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು

- ವಾರ್ಡ್ ವ್ಯಾಪ್ತಿಯ ಎಲ್ಲಾ ರಾಜಕಾಲುವೆಗಳ ಹೂಳು ತೆಗೆಯುವ ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಎರಡು ತಿಂಗಳ ಒಳಗೆ ಎಲ್ಲಾ ರಾಜಕಾಲುವೆಗಳಲ್ಲಿ ಹೂಳು ತೆಗೆಯಲಾಗುವುದು ಎಂದು ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಎಸ್.ಡಬ್ಲ್ಯೂ.ಡಿ ವಿಭಾಗಕ್ಕೆ 50 ಕೋಟಿ ಅನುದಾನ ಮಂಜೂರಾಗಿದ್ದು, ದೊಡ್ಡಬಿದರಕಲ್ಲು, ಲಿಂಗಧೀರನಹಳ್ಳಿ, ಕರಿಹೋಬನಹಳ್ಳಿ ವ್ಯಾಪ್ತಿಗಳಲ್ಲಿ ರಾಜಕಾಲುವೆಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ದೊಡ್ಡಬಿದರಕಲ್ಲು ರಲ್ಲಿ ರಾಜಕಾಲುವೆ ಮಧ್ಯ ಪೈಪ್ ಲೈನ್ ಬಂದಿದ್ದು, ಈ ಸಂಬಂಧ ಶುಕ್ರವಾರ ಬೆಳ್ಳಗ್ಗೆ 10.00 ಗಂಟೆಗೆ ವಾರ್ಡ್ ಕಮಿಟಿ ಸದಸ್ಯರು ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳೊಂದಿಗೆ ಜಂಟಿಯಾಗಿ ಸ್ಥಳ ಪರಿಶೀಲಿಸುವಂತೆ ಸಭೆಯಲ್ಲಿ ಚರ್ಚಿಸಲಾಯಿತು.
- ವಾರ್ಡ್ ವ್ಯಾಪ್ತಿಯ ನವಿಲು ನಗರ ಮತ್ತು ರಾಘವೇಂದ್ರ ನಗರದಲ್ಲಿ ರಾಜಕಾಲುವೆ ಕೆಲಸ ನಡೆಯುತ್ತಿದ್ದು, ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸುವಂತೆ ಅಮರನಾಥ್, ಸಹಾಯಕ ಅಭಿಯಂತರರು ರವರು ಸಭೆಯಲ್ಲಿ ತಿಳಿಸಿದರು. ನಂತರ ನೋಡಲ್ ಅಧಿಕಾರಿಗಳು ಮಾತನಾಡಿ ಈ ಬಗ್ಗೆ ಬೆಸ್ಕಾಂ ಅಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

8) ವಾರ್ಡ್ ವ್ಯಾಪ್ತಿಯಲ್ಲಿನ ಎಸ್.ಡಬ್ಲ್ಯೂ.ಎಂ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು

- ವಾರ್ಡ್ ವ್ಯಾಪ್ತಿಯ ಘನ ತ್ಯಾಜ್ಯ ನಿರ್ವಹಣಾ ಘಟಕದಲ್ಲಿ ದುರ್ವಾಸನೆ ಬರುತ್ತಿದ್ದು, ಅದನ್ನು ನಿಯಂತ್ರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಚರ್ಚಿಸಲಾಯಿತು.
- ಘನ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಸಂಬಂಧಿಸಿದ ನಿಯಮಗಳು ಮತ್ತು ಷರತ್ತುಗಳನ್ನು ಮುಂದಿನ ಸಭೆಗೆ ತರುವಂತೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಿದರು.

9) ವಾರ್ಡ್. ವ್ಯಾಪ್ತಿಯಲ್ಲಿನ ವಿದ್ಯುತ್ ವಿಭಾಗ (ಬಿ.ಬಿ.ಎಂ.ಪಿ) ಬಗ್ಗೆ ಚರ್ಚಿಸಲಾದ ವಿಷಯಗಳು

- ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳಿಗೆ ಸಂಬಂಧಿಸಿದಂತೆ 1600 ಹೊಸ ಬೀದಿ ದೀಪಗಳು ಮಂಜೂರು ಆಗಿರುವ ಬಗ್ಗೆ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

ಮೇಲ್ಕಂಡ ಎಲ್ಲಾ ಅಂಶಗಳಿಗೂ ಕ್ರಮ ಕೈಗೊಳ್ಳಬೇಕಾದ ಎಲ್ಲಾ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡು ಮುಂದಿನ ಸಭೆಗೆ ಪೂರ್ಣ ಮಾಹಿತಿಯೊಂದಿಗೆ ಎಲ್ಲಾ ಅಧಿಕಾರಿಗಳು ಹಾಜರಾಗಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.40, ದೊಡ್ಡಬಿದರಕಲ್ಲು

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ.40, ದೊಡ್ಡಬಿದರಕಲ್ಲು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

**ಅಧಿಕಾರಿಗಳ ಮಾಹಿತಿಗಾಗಿ**

1. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ. ರವರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
3. ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಮಂಡಿಸಿದೆ.
4. ಮಾನ್ಯ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ರವರ ಮಾಹಿತಿಗಾಗಿ ಕಳುಹಿಸಿದೆ.
5. ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಕೆಂ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ರವರ ಮಾಹಿತಿಗಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಡಿ ರವರ ಮಾಹಿತಿಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಟಿ.ಡಬ್ಲ್ಯೂ.ಎಸ್.ಎಸ್.ಟಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರ ಮಾಹಿತಿಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ ರವರ ಮಾಹಿತಿಗಾಗಿ ಕಳುಹಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
14. ವಲಯ ಅರಣ್ಯಧಿಕಾರಿಗಳು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
15. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳು ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
16. ತೋಟಗಾರಿಕೆ ಅಧೀಕ್ಷಕರು, ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
17. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.40, ದೊಡ್ಡಬಿದರಕಲ್ಲು ರವರ ಮಾಹಿತಿಗಾಗಿ ಕಳುಹಿಸಿದೆ.
18. ಪೋಲೀಸ್ ಇನ್‌ಸ್ಪೆಕ್ಟರ್, ಪೀಣ್ಯ/ಬ್ಯಾಡರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
19. ಪರಿಸರ ಅಧಿಕಾರಿಗಳು ಮಾಲಿನ್ಯ ನಿಯಂತ್ರಣ ಮಂಡಳಿ ರವರ ಮಾಹಿಗಾಗಿ ಕಳುಹಿಸಿದೆ.